OS No. 83/2017 PW-1

<u>ದಿನಾಂಕ **16.12.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **3** ನೇ ಪ್ರತಿವಾದಿ ಪರ ಶ್ರೀ ಎಲ್ ಎ ವಕೀಲರಿಂದಃ</u>

ಚಿಕ್ಕಣ್ಣ ಅಲಿಯಾಸ್ ಚಿಕ್ಕಯ್ಯರವರು ನನ್ನ ತಂದೆ ದಿಃ 17.12.2006 ರಲ್ಲಿ ತೀರಿಕೊಂಡರು ಎಂದರೆ ನಿಜ. ನನ್ನ ತಂದೆ ತೀರಿಕೊಂಡ ನಂತರ 2 ನೇ ಪ್ರತಿವಾದಿಯ ಹೆಸರಿನಲ್ಲಿ ಆಸ್ತಿಗಳ ದಾಖಲಾದವು ಎಂದರೆ ನಿಜ. 2005-2006 ರಲ್ಲಿ ಆದಂತಹ ಖಾತಾ ವಿರುದ್ದ ನಾನು ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಿಃ15.09.2017 ರಂದು 1 ಮತ್ತು 2 ನೇ ಪ್ರತಿವಾದಿಯವರು ದಾವಾ ಐಟಂ ನಂಬರ್ 1 ಅನ್ನು 3 ನೇ ಪ್ರತಿವಾದಿಗೆ ಕ್ರಯದ ಕರಾರು ಮಾಡಿಕೊಟ್ಟಿರುತ್ತಾರೆಂದರೆ ನಿಜ. 3 ನೇ ಪ್ರತಿವಾದಿಗೆ ನನ್ನ ಬಗ್ಗೆ ಮಾಹಿತಿ ಇಲ್ಲ ಎಂದರೆ ನಿಜ. ನಾನು ಮತ್ತು 1 ಮತ್ತು 2 ನೇ ಪ್ರತಿವಾದಿಯವರು ಶಾಮೀಲಾಗಿ ಸುಳ್ಳು ದಾವಾ ಹಾಕಿರುತ್ತೇವೆಂದರೆ ಸುಳ್ಳು. 2005 ರಿಂದ 2017 ರವರೆಗೆ 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಖಾತಾ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರ ಕ್ರಯದ ಕರಾರನ್ನು 1 ಮತ್ತು 2 ನೇ ಪ್ರತಿವಾದಿಯವರು ಕುಟುಂಬದ ಕೈಸಾಲ ಮತ್ತು ಗೃಹ ಕೃತ್ಯದ ಖರ್ಚಿಗಾಗಿ ಮಾಡಿರುತ್ತಾರೆಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿಗೆ ಕ್ರಯ ಮಾಡಿಕೊಡಬಾರದು ಎಂದು ಈ ಸುಳ್ಳು ದಾವಾ ಹಾಕಿರುತ್ತೇನೆಂದರೆ ಸುಳ್ಳು. ನಾವು ಕ್ರಯ ಮಾಡಿಕೊಡಲು ಕಾನೂನು ಪ್ರಕಾರ ಬಾಧ್ಯಸ್ಥರಾಗಿದ್ದೇವೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.